**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ನಂಜನಗೂಡು</u>**

**<u>ಸಿ.ಸಿ. ನಂ.1950/2014</u>**

ಪಿರ್ಯಾದಿದಾರರು : ಕವಲಂದೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರುಃ

1. ಮೂರ್ತಿ ಬಿನ್ ಸಿದ್ದಯ್ಯ 27 ವರ್ಷ
2. ಕಮಲಮ್ಮ ಕೋಂ ಕೆಕ್ಕೆ ಸಿದ್ದಯ್ಯ 55 ವರ್ಷ
3. ಕೆಕ್ಕೆ ಸಿದ್ದಯ್ಯ ಬಿನ್ ಲೇಟ್ ಸಿದ್ದಯ್ಯ(ಮೃತಪಟ್ಟಿರುತ್ತಾರೆ)
4. ನಿಂಗರಾಜು ಬಿನ್ ಕೆಕ್ಕೆ ಸಿದ್ದಯ್ಯ 30 ವರ್ಷ
5. ರೇಖ ಕೋಂ ನಿಂಗರಾಜು 26 ವರ್ಷ
6. ರಂಗಸ್ವಾಮಿ ಬಿನ್ ಲೇಟ್ ದೊಡ್ಡಯ್ಯ (ಮೃತಪಟ್ಟಿರುತ್ತಾರೆ)
7. ಪುಟ್ಟ ಬಿನ್ ಲೇಟ್ ದೊಡ್ಡಯ್ಯ

ಎಲ್ಲರ ವಾಸಃ ಹನುಮನಪುರ ಗ್ರಾಮ, ನಂಜನಗೂಡು ತಾಲ್ಲೂಕು

**::<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತರ ಹೇಳಿಕೆ</u>::**

ಪ್ರಶ್ನೆ 1- ಈ ಪ್ರಕರಣದಲ್ಲಿಯ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿಸಿಕೊಂಡಿದ್ದೀರಾ?

**1 ನೇ ಆರೋಪಿ ಉತ್ತರ-**

**2 ನೇ ಆರೋಪಿ ಉತ್ತರ-**

**4 ನೇ ಆರೋಪಿ ಉತ್ತರ-**

**5 ನೇ ಆರೋಪಿ ಉತ್ತರ-**

**7 ನೇ ಆರೋಪಿ ಉತ್ತರ-**

ಪ್ರಶ್ನೆ 2-ಪ್ರಾಸಾ-1-ಅನಿತಾ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 25:11:2013 ರಂದು ತಮ್ಮ ಗ್ರಾಮದ ಮಂಟೆಸ್ವಾಮಿ ದೇವಸ್ಥಾನದಲ್ಲಿ ತನ್ನ ಮತ್ತು ಒಂದನೇ ಆರೋಪಿಯ ಮದುವೆಯಾಗಿರುತ್ತದೆ. ಮದುವೆ ಸಮಯದಲ್ಲಿ ಚಾಸಾ. 4, 9 ರಿಂದ 12 ಉಪಸ್ಥಿತರಿದ್ದರು.

ಮದುವೆಯಾದ ನಂತರ ತಾನು ತನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ. ಒಂದನೇ ಆರೋಪಿ ಮದುವೆಯಾದ ನಂತರ ತನ್ನನ್ನು ಒಂದು ತಿಂಗಳ ಕಾಲ ಚನ್ನಾಗಿ ನೋಡಿಕೊಂಡಿರುತ್ತಾನೆ. ನಂತರ ಒಂದನೇ ಆರೋಪಿ ಓಲೆ, ಚಿನ್ನ ಹಾಗೂ ದುಡ್ಡನ್ನು ತೆಗೆದುಕೊಂಡು ಬಾ ಅಂತ ಹೇಳಿ ತನ್ನ ಜೊತೆಗೆ ಜಗಳವಾಡುತ್ತಿದ್ದ. ಮೂರ್ತಿ ಜೊತೆಗೆ 2 ರಿಂದ 7ನೇ ಆರೋಪಿತರು ತನ್ನ ಜೊತೆಗೆ ಜಗಳವಾಡುತ್ತಿದ್ದರು. ಆರೋಪಿತರು ತಾನು ತಂದಿರುವ ಸೌದೆ, ತಾನು ತಂದಿರುವ ನೀರಿನಲ್ಲಿ ಸ್ನಾನ ಮಾಡುತ್ತೀಯಾ ಎಂದು 2ನೇ ಆರೋಪಿ ತನ್ನ ಜೊತೆ ಜಗಳವಾಡುತ್ತಿದ್ದರು. ಆಗ ತಾನು 2ನೇ ಆರೋಪಿಗೆ ತನ್ನ ಗಂಡ 1ನೇ ಆರೋಪಿ ಸೌದೆ ತಂದಿರುತ್ತಾನೆ ಎಂದು ಹೇಳಿದೆ. ಆಗ 2ನೇ ಆರೋಪಿ ನೀನು ಯಾರು ಕೇಳುವುದಕ್ಕೆ ಅಂತ ಕೋಪಗೊಂಡು ತನಗೆ ಸೌದೆಯಿಂದ ಹೊಡೆದಿರುತ್ತಾನೆ. ಇನ್ನುಳಿದ ಆರೋಪಿತರು ತನಗೆ ಮನೆಯಿಂದ ಹೊರಗೆ ಹೋಗು ಅಂತ ಹೇಳಿ ಬೈಯುತ್ತಿದ್ದರು. ಗಲಾಟೆಯಾಗಿ ಸುಮಾರು 3 ವರ್ಷಗಳ ಹಿಂದೆ ಆಗಿದೆ. ಗಲಾಟೆಯು ಮಧ್ಯಾಹ್ನ 3 ಗಂಟೆಯಲ್ಲಿ ಆಗಿದೆ ಆನಂತರ ಕವಲಂದೆ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದೇನೆ. ಆರೋಪಿತರು ಕೈಗಳಿಂದ ತನ್ನ ಕೈಗೆ ಹೊಡೆದಿರುತ್ತಾರೆ. ದೂರು ನೀಡಿದ ಮರುದಿನ ಕವಲಂದೆ ಪೊಲೀಸರು ಮಹಜರ್ ಬರೆಯಲು ನಮ್ಮ ಗ್ರಾಮದ ಹನುಮಂತಪುರ ಗ್ರಾಮದ ತಮ್ಮ ಮನೆಗೆ ಬಂದರು. ಮಹಜರ್ ಕ್ರಮ ಜರುಗಿಸುವಾಗ ದೊರೆಸ್ವಾಮಿ ಮತ್ತು ಮಹದೇವಸ್ವಾಮಿ ಉಪಸ್ಥಿತರಿದ್ದರು. ಗಲಾಟೆಯಾದ ಸ್ಥಳವನ್ನು ತಾನು ಪೋಲೀಸರಿಗೆ ತೋರಿಸಿರುತ್ತೇನೆ. ಮಹಜರ್‌ನ್ನು ಆ ದಿನ 11.30 ರಿಂದ 12ಗಂಟೆವರೆಗೆ ಬರೆಯಲಾಗಿದೆ. ಅಮಾನತ್ತು ಮಹಜರ್ ಜರುಗಿಸುವಾಗ ಪೊಲೀಸರು ತಮ್ಮ ಮದುವೆಯ ಆಹ್ವಾನಪತ್ರಿಕೆಯನ್ನು ಹಾಗೂ ಮದುವೆ ಛಾಯಾಚಿತ್ರಗಳನ್ನು ಅಮಾನತ್ತು ಪಡಿಸಿಕೊಂಡರು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**1ನೇ ಆರೋಪಿ ಉತ್ತರ-**

**2ನೇ ಆರೋಪಿ ಉತ್ತರ-**

**4ನೇ ಆರೋಪಿ ಉತ್ತರ-**

**5 ನೇ ಆರೋಪಿ ಉತ್ತರ-**

**7 ನೇ ಆರೋಪಿ ಉತ್ತರ-**

ಪ್ರಶ್ನೆ-3- ಪ್ರಾಸಾ.11 -ಶ್ರೀ.ಜವರಶೆಟ್ಟಿ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 22.08.2014 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ 13 ರವರಿಂದ 3 ನೇ ಆರೋಪಿಯ ಹೆಸರಿನಲ್ಲಿ ಅಸೆಸ್ ಮೆಂಟ್ ನ ಯಥಾ ನಕಲನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದ ಕಾರಣ ಅದೇ ದಿನ ಆರೋಪಿಗಳ ವಿರುದ್ಧ ದೋಷಾರೋಪಣ ಪತ್ರವನ್ನು ಮಾನ್ಯ ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**1 ನೇ ಆರೋಪಿ ಉತ್ತರ-**

**2 ನೇ ಆರೋಪಿ ಉತ್ತರ-**

**4 ನೇ ಆರೋಪಿ ಉತ್ತರ-**

**5 ನೇ ಆರೋಪಿ ಉತ್ತರ-**

**7 ನೇ ಆರೋಪಿ ಉತ್ತರ-**

ಪ್ರಶ್ನೆ 4-ಪ್ರಾಸಾ-12- ಶ್ರೀ.ಮಹೇಶ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04.07.2014 ರಂದು ಸಂಜೆ 6.30 ನಾನು ಠಾಣಾ ಉಸ್ತುವಾರಿಯಲ್ಲಿರುವಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಹೊಂದಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ 104/2014 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವ ವನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿಃ 05.07.2014 ರಂದು ಚಾಸಾ 1 ರವರು ಠಾಣೆಗೆ ಹಾಜರಾಗಿ 1 ನೇ ಆರೋಪಿಯೊಂದಿಗೆ ವಿವಾಹವಾಗಿರುವ ಬಗ್ಗೆ ಹಾಜರುಪಡಿಸಿದ ಒಂದು ಲಗ್ನ ಪತ್ರಿಕೆ ಮತ್ತು ಆರು ಛಾಯಾ ಚಿತ್ರಗಳನ್ನು ಹಾಜರುಪಡಿಸಿದ್ದು ಪಂಚರಾದ ಚಾಸಾ 4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 9 ಗಂಟೆಯಿಂದ 9.30 ರ ಸಮಯದಲ್ಲಿ ಮಹಜರ್ ಮೂಲಕ ಅಮಾನತ್ ಪಡಿಸಿಕೊಂಡಿರುತ್ತೇನೆ. ಅವುಗಳನ್ನು ಪಿ.ಎಫ್. 53/2014 ರಂತೆ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ

ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಕೃತ್ಯ ಸ್ಥಳಕ್ಕೆ ತೆರಳಿ ಚಾಸಾ 1 ರವರು ತೋರಿಸಿಕೊಟ್ಟ ಮೇರೆಗೆ ಪಂಚರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಮಹಜರ್ ಕ್ರಮವನ್ನು ಜರುಗಿಸಿದ್ದು ಬೆಳಿಗ್ಗೆ 11.30 ರಿಂದ 12.00 ಗಂಟೆಯ ವರೆಗೆ ಜರುಗಿಸಿರುತ್ತೇನೆ. ಸ್ಥಳದಲ್ಲೇ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ 4, 6 ರಿಂದ 12 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 20.07.2014 ರಂದು ತನಗೆ ವರ್ಗಾವಣೆಯಾದ ಕಾರಣ ಈ ಪ್ರಕರಣದ ಕಡತವನ್ನು ಚಾಸಾ 17 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**1 ನೇ ಆರೋಪಿ ಉತ್ತರ-**

**2 ನೇ ಆರೋಪಿ ಉತ್ತರ-**

**4 ನೇ ಆರೋಪಿ ಉತ್ತರ-**

**5 ನೇ ಆರೋಪಿ ಉತ್ತರ-**

**7 ನೇ ಆರೋಪಿ ಉತ್ತರ-**

ಪ್ರಶ್ನೆ 5-ಈ ಪ್ರಕರಣದಲ್ಲಿ ತಾವೇನಾದರೂ ಹೇಳಲಿಕ್ಕೆ ಇದೆಯೇ?

**1 ನೇ ಆರೋಪಿ ಉತ್ತರ-**

**2 ನೇ ಆರೋಪಿ ಉತ್ತರ-**

**4 ನೇ ಆರೋಪಿ ಉತ್ತರ-**

**5 ನೇ ಆರೋಪಿ ಉತ್ತರ-**

**7 ನೇ ಆರೋಪಿ ಉತ್ತರ-**

ಪ್ರಶ್ನೆ 6- ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸುವುದಕ್ಕೆ ಇದೆಯೇ?

**1 ನೇ ಆರೋಪಿ ಉತ್ತರ-**

**2 ನೇ ಆರೋಪಿ ಉತ್ತರ-**

**4 ನೇ ಆರೋಪಿ ಉತ್ತರ-**

**5 ನೇ ಆರೋಪಿ ಉತ್ತರ-**

**7 ನೇ ಆರೋಪಿ ಉತ್ತರ-**

(ಆರೋಪಿತರಿಗೆ ಹೇಳಿಕೆಯನ್ನು ಅವರಿಗೆ ತಿಳಿಯುವ ಹಾಗೆ ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಅವರು ಕೊಟ್ಟ ಉತ್ತರವನ್ನು ನಮೂದಿಸಿಕೊಳ್ಳಲಾಯಿತು)

ದಿನಾಂಕ:11.02.2026

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು